

ಕೆ.ವಿ. ಸುಬ್ರಹ್ಮಣ್ಯಂ

# ಗಾಂಧಿ

## ವಿಶ್ವಾತ್ಮಕ ವ್ಯಕ್ತಿತ್ವದ ದೃಶ್ಯ ಧ್ಯಾನ




ಕಲಾಕೃತಿ: ಶೇಖರ್ ಬಳ್ಳಾರಿ

ಬದುಕಿದ್ದಾಗಲೂ ಸಾವಿನ ನಂತರವೂ ಗಾಂಧಿ ಎನ್ನುವ ಬೆರಗಿನೊಂದಿಗೆ ಸೃಜನಶೀಲ ಕಲಾವಿದರು ಮತ್ತೆ ಮತ್ತೆ ಎದುರಾಗುತ್ತಲೇ ಇದ್ದಾರೆ. ಈ ಅನುಸಂಧಾನ, ಗಾಂಧಿಯನ್ನು ಅರಿಯುವ ಬಗೆಯಷ್ಟೇ ಅಲ್ಲ, ಕಲೆಯನ್ನು ಮತ್ತಷ್ಟು ಮಾನವೀಯಗೊಳಿಸುವ ಪ್ರಯತ್ನವೂ ಹೌದು. ಗಾಂಧಿ ಎನ್ನುವ ರೂಪಕದೊಂದಿಗೆ ಕಲಾವಿದರು ನಡೆಸಿರುವ 'ದೃಶ್ಯ ಧ್ಯಾನ' ಚರಿತ್ರೆ ಹಾಗೂ ವರ್ತಮಾನವನ್ನು ಅರ್ಥ ಮಾಡಿಕೊಳ್ಳಲು ಸಹೃದಯರಿಗೆ ಹೊಸ ಕಣ್ಣುಗಳನ್ನು ನೀಡಬಲ್ಲದು.